**ಅತೀ ಜರೂರು**

ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/ಚಟುವಟಿಕೆ/05/2017-18

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01
ದಿನಾಂಕ: 24.01.2019

## ಸುತ್ತೋಲೆ

**ವಿಷಯ:** ಯುವ ಮತದಾನ ನೊಂದಣಿ ಕುರಿತು.

**ಉಲ್ಲೇಖ:** ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕ ಇವರ ಸೂಚನಾ ಪತ್ರ ಸಂಖ್ಯೆ: DPAR 252 CHUMAPA 2018 ದಿನಾಂಕ: 23.01.2019

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಮುಂಬರುವ 2019 ರ ಲೋಕಸಭಾ ಚುನಾವಣೆಗೆ ಯುವ ಮತದಾರರ ನೊಂದಣಿಯನ್ನು ಹೆಚ್ಚಿಸಲು ತಾಂತ್ರಿಕ ಶಿಕ್ಷಣ ಇಲಾಖೆಗೆ ಒಳಪಡುವ ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ತಮ್ಮ ಜಿಲ್ಲೆ/ತಾಲ್ಲೂಕಿಗೆ ಸಂಬಂಧಿಸಿದ ಚುಣಾವನಾಧಿಕಾರಿಗಳನ್ನ ಸಂಪರ್ಕಿಸುವುದು. ಚುಣಾವನಾಧಿಕಾರಿಗಳಿಂದ **BLO** (Booth level officer) ರವರನ್ನು ತಮ್ಮ ಸಂಸ್ಥೆಗೆ ಆಹ್ವಾನಿಸಿ ತಮ್ಮ ಸಂಸ್ಥೆಯಲ್ಲಿರುವ ಯುವ ಮತದಾರರಿಗೆ ಸದರಿಯವರಿಂದ ನೊಂದಾವಣೆಗೆ ಫಾರ್ಮ್‌ಗಳನ್ನು ಹಂಚಿಕೆ ಮಾಡಿ, ಯುವ ಮತದಾರರಿಂದಲೇ ಆ ಫಾರ್ಮಗಳನ್ನು ಭರ್ತಿ ಮಾಡಿಸುವುದು. ಭರ್ತಿ ಮಾಡಲಾದ ಫಾರ್ಮಗಳನ್ನು BLO ರವರಿಗೆ ಅಂದೇ ಹಿಂದಿರುಗಿಸುವುದು. ಯುವ ಮತದಾರರಿಂದ ಭರ್ತಿ ಮಾಡಲಾದ ಫಾರ್ಮಗಳನ್ನು ಚುಣಾವನಾಧಿಕಾರಿಗಳು ಪರಿಶೀಲಿಸಿ ಅವರುಗಳಿಗೆ EPIC ಕಾರ್ಡಗಳನ್ನು ತಲುಪಿಸುವ ವ್ಯವಸ್ಥೆ ಮಾಡಲಿದ್ದಾರೆ. ರಾಜ್ಯದ ಚುನಾವಣಾಯೋಗದ ಅಂತರರ್ಜಾಲತಾಣ (http://www.ceokarnataka.kar.nic.in/BLOList_2017/Dist_List.aspx) ದಲ್ಲಿಯೂ ಸಹ **BLO** ರವರ ವಿವರಗಳನ್ನು ಪಡೆಯಬಹುದಾಗಿದೆ.

ಈ ಪ್ರಕ್ರಿಯೆಯು ಅತೀ ಜರೂರಾಗಿರುವುದರಿಂದ, ಪ್ರಥಮ ಆದ್ಯತೆಮೆರಿಗೆ ಜಾಗ್ರತೆಯಿಂದ ಕೈಗೊಳ್ಳುವುದು. ಯುವ ಮತದಾರರ ನೊಂದಣಿಯನ್ನು ನಿರ್ವಹಿಸಿದ ವರದಿಯನ್ನು ದಿನಾಂಕ: 28-01-2019 ರ ಒಳಗೆ ಇಲಾಖೆಯ ರಾಷ್ಟ್ರೀಯ ಸೇವಾ ಯೋಜನೆ ಕೋಶದ ಮಿಂಚಂಚೆ nssdte@gmail.com ಗೆ ತಪ್ಪದೇ ಕಳುಹಿಸಲು ಸೂಚಿಸಲಾಗಿದೆ.

ನಿರ್ದೇಶಕರು

ಇವರಿಗೆ:

1. ತಾಂತ್ರಿಕ ಶಿಕ್ಷಣ ಇಲಾಖೆಗೆ ಒಳಪಡುವ ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ -ಸೂಕ್ತ ಕ್ರಮಕ್ಕಾಗಿ

ಪ್ರತಿ:

1. ರಾಜ್ಯ ಚುನಾವಣಾಧಿಕಾರಿಗಳು, ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-01- ಮಾಹಿತಿಗಾಗಿ.
2. ಇ-ಆಡಳಿತ ಅಂತರ್‌ಜಾಲತಾಣದಲ್ಲಿ ಪ್ರಕಟಿಸಲು
3. ಕಛೇರಿ ಕಡತಕ್ಕೆ.